# ಯುವ ಬರಹಗಾರರ ತಲ್ಲಣಗಳು ಮತ್ತು ಹೊಸ ಹುಡುಕಾಟ

**ಸುಮಾ ವಸಂತ ಸಾವಂತ**

ಕನ್ನಡ ಉಪನ್ಯಾಸಕರು, ಕೆ.ಎಲ್.ಇ ಸಂಸ್ಥೆಯ ಜಿ. ಐ. ಬಾಗೆವಾಡಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ.

DOI: https://doi.org/10.5281/zenodo.17257734

## ABSTRACT:

ಸಾಹಿತ್ಯವು ಸ್ಥಿರವಾಗಿರುವುದಿಲ್ಲ; ಅದು ಕಾಲದ ಹಾದಿ ಅನುಸರಿಸಿ ನಿರಂತರವಾಗಿ ರೂಪಾಂತರಗೊಳ್ಳುತ್ತದೆ. ಪ್ರತಿಯೊಂದು ಪೀಳಿಗೆಯ ಬರಹಗಾರರು ತಮ್ಮದೇ ಆದ ಹೊಸ ಹಾದಿಯನ್ನು ಹುಡುಕುತ್ತಾರೆ. ಈ ಪೈಕಿ ಯುವ ಬರಹಗಾರರ ಹೊಸ ಹುಡುಕಾಟ ಅತ್ಯಂತ ವಿಶೇಷ. ಏಕೆಂದರೆ, ಯುವಕರಲ್ಲಿ ಉತ್ಸಾಹ, ಬದಲಾವಣೆಯ ಹಂಬಲ, ಹೊಸತನದ ತವಕ ಇವೆಲ್ಲವೂ ತೀವ್ರವಾಗಿ ಕಾಣುತ್ತವೆ. ಭಾಷೆಯಲ್ಲಿನ ಹೊಸತನದೊಂದಿಗೆ ಯುವ ಬರಹಗಾರರು ಪರಂಪರೆಯ ಕಠಿಣ ಶೈಲಿಯಿಂದ ದೂರವಾಗಿ ಸರಳ, ನುಡಿಗಟ್ಟುಗಳ ಸಮೃದ್ಧ ಭಾಷೆಯನ್ನು ಬಳಸುತ್ತಿದ್ದಾರೆ. "ನನ್ನ ನುಡಿಯೇ ನನ್ನ ಕಲೆ" ಎಂಬ ತೇಜಸ್ವಿಯವರ ನಿಲುವು ಇವರಿಗೂ ಪ್ರೇರಣೆ. ಇಂದಿನ ಯುವ ಬರಹಗಾರರು ತಮ್ಮ ದೈನಂದಿನ ಬದುಕಿನ ಮಾತುಗಳನ್ನು ಸಾಹಿತ್ಯದ ಹೃದಯವಾಗಿಸುತ್ತಿದ್ದಾರೆ. ಶೈಲಿಯ ವೈವಿಧ್ಯತೆಯಲ್ಲಿ ಯುವ ಬರಹಗಾರರು ಕಥೆ–ಕವನ–ಕಾದಂಬರಿಯ ಸಾಂಪ್ರದಾಯಿಕ ಹಾದಿಗೆ ಸೀಮಿತವಾಗದೆ, ಕಿರು ಕತೆಗಳು, ಕವಿತೆಗಳ ನವ್ಯ ರೂಪಗಳು, ಬ್ಲಾಗ್ ಬರಹ, ಡಿಜಿಟಲ್ ಸಾಹಿತ್ಯ ಮುಂತಾದ ಹಾದಿಗಳನ್ನು ಹುಡುಕುತ್ತಿದ್ದಾರೆ. ಹೀಗೆ ಸಾಹಿತ್ಯವನ್ನು ಹೊಸ ಮಾಧ್ಯಮಗಳಲ್ಲಿ ತಲುಪಿಸಲು ಅವರ ಪ್ರಯತ್ನ ಕಾಣಿಸುತ್ತದೆ. ಜೊತೆಗೆ ಬದಲಾವಣೆಯ ಹಂಬಲ ಬಯಸುವ ಯುವ ಬರಹಗಾರರು ಹಳೆಯ ಮೌಲ್ಯಗಳನ್ನು ಕುರುಡಾಗಿ ಅನುಸರಿಸುವುದಿಲ್ಲ. ಬದಲಾಗಿ, ಅವುಗಳನ್ನು ಪ್ರಶ್ನಿಸಿ ಹೊಸ ಅರ್ಥ ನೀಡಲು ಪ್ರಯತ್ನಿಸುತ್ತಾರೆ. ಕುವೆಂಪುರವರು ಹೇಳಿದಂತೆ –"ಹೊಸ ಹೊಲವು ಬಿತ್ತನೆಗೆ ಬಯಸುತ್ತದೆ" ಅವನ ಬರಹವೂ ಸಮಾಜದಲ್ಲಿ ಬದಲಾವಣೆಯ ಬಿತ್ತನೆ ಮಾಡಲು ಹಂಬಲಿಸುತ್ತದೆ. ಯುವ ಬರಹಗಾರನ ಮತ್ತೊಂದು ಹೊಸ ಹುಡುಕಾಟ ಎಂದರೆ ತನ್ನದೇ ಆದ ಧ್ವನಿಯನ್ನು ಕಂಡುಹಿಡಿಯುವುದು. ಅಡಿಗರು ನವ್ಯ ಚಳವಳಿ ಆರಂಭಿಸಿದAತೆ, ಇಂದಿನ ಯುವ ಬರಹಗಾರರೂ ತಮ್ಮದೇ ಆದ ನವೀನ ಧ್ವನಿಯನ್ನು ರೂಪಿಸುತ್ತಿದ್ದಾರೆ. ಅವರು "ಹಿರಿಯರ ಪ್ರತಿಧ್ವನಿಯಲ್ಲ, ನನ್ನದೇ ಸ್ವರ ಬೇಕು" ಎಂಬ ತವಕದಿಂದ ಬರೆಯುತ್ತಿದ್ದಾರೆ. ಯುವ ಬರಹಗಾರರ ಹೊಸ ಹುಡುಕಾಟವು ಕನ್ನಡ ಸಾಹಿತ್ಯಕ್ಕೆ ನೂತನ ಚೈತನ್ಯ ನೀಡುತ್ತಿದೆ. ಹೊಸ ವಿಷಯಗಳು, ಹೊಸ ಶೈಲಿಗಳು, ಹೊಸ ದೃಷ್ಟಿಕೋನಗಳು ಅವರ ಬರಹದ ಮೂಲಕ ಸಾಹಿತ್ಯವನ್ನು ಸಮೃದ್ಧಗೊಳಿಸುತ್ತಿವೆ. ಹೀಗಾಗಿ, ಯುವ ಬರಹಗಾರರ ಹೊಸ ಹುಡುಕಾಟವೆಂದರೆ ಕೇವಲ ಸೃಜನಶೀಲತೆಯ ಚಟುವಟಿಕೆ ಅಲ್ಲ; ಅದು ಸಮಾಜವನ್ನು ಬದಲಿಸುವ ಶಕ್ತಿ.

**KEYWORDS:**

ಬದಲಾವಣೆಯ ಹಂಬಲ, ಹೊಸತನದ ತವಕ, ಸಾಮಾಜಿಕ ಸಂದರ್ಭ, ಭಾಷಿಕ ಸಂದರ್ಭ, ಪ್ರಗತಿಪರ ದೃಷ್ಟಿ.

ಸಾಮಾನ್ಯವಾಗಿ ಹೊಸದೇನನ್ನಾದರೂ ಗುರುತಿಸಬೇಕಾದರೆ ಈಗಾಗಲೇ ಚಾಲ್ತಿಯಲ್ಲಿ ಇರುವಂತದ್ದಕ್ಕೆ ಹೋಲಿಸಲಾಗುತ್ತದೆ. ಚಾಲ್ತಿಯಲ್ಲಿರುವಂತಹದ್ದು ಅಸಾಮಾನ್ಯದ್ದಾದರೆ ಉದಾ: ಮೊನೋಪೋಲೈಜ್ ಮಾಡಿದಾಗ (ಕೋಕಕೋಲ, ಬ್ಯೂಟಿ ಕ್ರೀಮ್, ಸೋಪ್) ಬಳಕೆದಾರರು ವಿಧಿ ಇಲ್ಲದೆ ಅದಕ್ಕೆ ಒಗ್ಗಿ ಹೋಗುತ್ತಾರೆ ಅಥವಾ ಬಳಸುವವರು ಈ ರೀತಿಯ ಅಡಿಕ್ಷನ್‌ಗೆ ಒಳಗಾದಾಗ (ಮಸಾಲೆ ಪುಡಿಗಳು, ಚಹಾ ಅಥವಾ ಕಾಫಿ ಪೌಡರ್ "ಬ್ರಾಂಡ್ ನೇಮ್"ಗೆ ಆಗುವ ಹಾಗೆ) ಅನಂತರ ಹೊಸದು ಏನೇ ಬಂದರೂ ಅವರಿಗೆ ಹಳೆಯದ್ದೇ ಚಲೋ ಅನಿಸುತ್ತದೆ. ಹೊಸದನ್ನು ಗುರುತಿಸುವಾಗ ಸಾಮಾನ್ಯವಾಗಿ ಚಲನೆಯಲ್ಲಿರುವ ಹಳೆಯದಕ್ಕೆ ಹೋಲಿಸಲಾಗುತ್ತದೆ ಹೀಗಾಗಿ ಹೊಸದು ಏನೇ ಹುಟ್ಟಿದರು ಸಹ ಅದು ತನ್ನ ಬುನಾದಿಯನ್ನು ಭದ್ರಪಡಿಸಿಕೊಳ್ಳುವವರೆಗೆ ಗುಮಾನಿ ಅಸಮಾಧಾನ ತೃಪ್ತಿಗಳನ್ನು ಎದುರಿಸಲೇಬೇಕಾಗುತ್ತದೆ. ಉಳಿದೆಲ್ಲ ಸರಕುಗಳ ಹಾಗೆ ಸಾಹಿತ್ಯವು ಒಂದು ಸಾಮಾಜಿಕ ಸರಕು. ಈವರೆಗೂ ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಪ್ರಚಾರದಲ್ಲಿರುವ ವ್ಯಕ್ತಿಕೇಂದ್ರಿತ ಸಾಹಿತ್ಯವು ತನ್ನದೇ ಆದ ರೀತಿಯಲ್ಲಿ ಕನ್ನಡ ಸಾಹಿತ್ಯವನ್ನು ರೂಪಿಸುತ್ತಾ ಬಂದಿದೆ. ಸಾಹಿತ್ಯವನ್ನು ಪರಿಗಣಿಸುವಾಗ ಅದು ಹೆಣ್ಣು ಬರೆದದ್ದು, ಗಂಡು ಬರೆದದ್ದು, ಯಾವ ಜಾತಿಯವರು ಬರೆದದ್ದು ಎಂಬುದು ಮುಖ್ಯವಲ್ಲ. ಅದು ಉತ್ತಮ ಸಾಹಿತ್ಯವಾಗಿರುವುದಷ್ಟೇ ಮುಖ್ಯ ಎನ್ನುವಂತಹ ಮಾತುಗಳನ್ನು ಕೇಳುತ್ತಲೇ ನಾವು ಕೆಲವರು ಬರೆಯಲಾರಂಭಿಸಿದ್ದೇವೆ. ಎಷ್ಟೇ ಕಷ್ಟಪಟ್ಟರೂ ಈ ಉತ್ತಮ ಸಾಹಿತ್ಯವನ್ನು ಬರೆಯುವುದು ಆಗುತ್ತಲೇ ಇರಲಿಲ್ಲ. ಪ್ರಪಂಚವನ್ನು ಮುಖ್ಯವಾಗಿ ಸ್ತ್ರೀ ಪುರುಷ ಸಂಬಂಧಗಳನ್ನು ಕೇವಲ ಪುರುಷರ ದೃಷ್ಟಿಕೋನದಿಂದ ಮಾತ್ರ ಅರ್ಥ ಮಾಡಿಕೊಳ್ಳುವುದು. ಉತ್ತಮ ಸಾಹಿತ್ಯದ ಬಹುಮುಖ್ಯ ಲಕ್ಷಣ ಅನ್ನುವುದನ್ನು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಹೀಗೆ ವ್ಯಕ್ತಿ ಕೇಂದ್ರೀತ ಹಾಗೂ ಪುರುಷ ಕೇಂದ್ರೀತ ನವ್ಯದ ಹಿನ್ನೆಲೆಯಲ್ಲಿ ಬರವಣಿಗೆಯನ್ನು ಆರಂಭಿಸಿದ ಹೆಚ್ಚು ಕಡಿಮೆ ಎಲ್ಲಾ ಬರಹಗಾರ್ತಿಯರೂ, ಈ ಉತ್ತಮ ಸಾಹಿತ್ಯದ ಅಧಮ ಲಕ್ಷಣಗಳನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಯಲ್ಲಿ ಕ್ರಮೇಣ ಇದರ ಮಾಯಾಜಾಲದಿಂದ ಹೊರ ಬಂದಿದ್ದಾರೆ. ಮಹಿಳಾ ಸಾಹಿತ್ಯವೆಂಬ ನಿರ್ದಿಷ್ಟ ವರ್ಗದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

ಸಾಹಿತ್ಯವು ವಿಶೇಷವಾದದ್ದು, ಅದು ಎಲ್ಲ ರೀತಿಯ ಗಡಿಗಳನ್ನು

ಮೀರಬಲ್ಲಂತಹ ಶಕ್ತಿಯುಳ್ಳ ಸರ್ವಕಾಲಿಕವಾದ ಅನುಭವವನ್ನು ಒಳಗೊಂಡ ವಿಶಿಷ್ಟವಾದ ವರ್ಗ. ಇಲ್ಲಿಯವರೆಗಿನ ಮೂಲಭೂತ ನಂಬಿಕೆಯ ಬುನಾದಿಯನ್ನೇ ಹೊಸ ಬರವಣಿಗೆಯು ಪ್ರಶ್ನಿಸುತ್ತಿದೆ. ಬದಲಿಗೆ ಸಾಹಿತ್ಯವು ನಿರ್ದಿಷ್ಟತೆಗಳಲ್ಲಿ ಬೇರು ಬಿಟ್ಟಂತಹ ಬಹು ಆಯಾಮಗಳನ್ನುಳ್ಳಂತಹ ಬಹುಮುಖೀನ ವರ್ಗ. ಇದರ ರೂಪುರೇಷೆ ಅರ್ಥಗಳು ಸಾಮಾಜಿಕ ಸಂದರ್ಭಕ್ಕೆ ಅನುಗುಣವಾಗಿ ಬದಲಾಗುತ್ತಿರುತ್ತವೆ ಎಂಬುದನ್ನು ಹೊಸ ಬರವಣಿಗೆಯು ಸ್ಪಷ್ಟಪಡಿಸುತ್ತಿದೆ. ಪ್ರತಿಯೊಂದು ಆಲೋಚನೆಯ ಮಾದರಿಯು ತಾತ್ವಿಕ ನಿಲುವು ವಿಭಿನ್ನವಾಗಿರುವುದರಿಂದ ಅದಕ್ಕೆ ಸಂಬಂಧಿಸಿದಂತೆ ಅದರ ಪರಿಕರಗಳು ದೃಷ್ಟಿಕೋನವು ಬದಲಾಗುತ್ತದೆ. ಈ ಬದಲಾವಣೆಯನ್ನು ಒಪ್ಪಿಕೊಳ್ಳದೆ ಹೋದಲ್ಲಿ ಕನ್ನಡದಲ್ಲಿ ಹೊಸದಾಗಿ ಸಾಹಿತ್ಯ ಸೃಷ್ಟಿಸುವವರಿಗೆ ನಿರಾಶದಾಯಕವಾದ ಗೊಂದಲಮಯವಾದ ವಾತಾವರಣ ಇದೆ ಅನಿಸುವುದು ಸಹಜ.

ಒಬ್ಬ ಬರಹಗಾರ ಮೊದಲು ತನಗೇನನಿಸುತ್ತದೆ ಅದನ್ನು ಪಕ್ವ ಮಾಡಿಕೊಂಡು ಆನಂತರ ತನ್ನನ್ನು ಮಧ್ಯಸ್ಥಿಕೆಯಾಗಿಟ್ಟುಕೊಂಡು ತನ್ನತನವನ್ನು ಹಾಗೂ ಸಮಾಜವನ್ನು ತೂಗುತ್ತಲೇ ತನ್ನತನವನ್ನು ಮೇಲುಗೈ ಮಾಡಿಕೊಂಡು ಬರೆಯುತ್ತಾನೆ. ಇದು ಎಲ್ಲ ಬರಹಗಾರರ ಸ್ವಾಭಾವಿಕ ಗುಣ. ಲೇಖಕರೊಳಗಿರುವ ವಿಷಯ, ಪದ ಬಳಕೆ, ಬರವಣಿಗೆಯ ವೇಗ ಈ ಮೂರು ಸಮತೋಲನದಲ್ಲಿದ್ದರೆ ಬರವಣಿಗೆ ಸಾಗುತ್ತದೆ. ಬರವಣಿಗೆಯ ವೇಗಕ್ಕಿಂತಲೂ ಮನಸ್ಸಿನ ವೇಗ ಹೆಚ್ಚಾಗಿದ್ದರೆ ಬರವಣಿಗೆ ನಿಂತೇ ಬಿಡುತ್ತದೆ.

**ಸಾಹಿತ್ಯ ರಚನೆಯಲ್ಲಿ ಎರಡು ಪ್ರಧಾನ ಪ್ರಕಾರಗಳಿವೆ:**

1) ಅನುಭವ ಸಾಹಿತ್ಯ

2) ಅನುಭಾವ ಸಾಹಿತ್ಯ

ಅನುಭವ ಸಾಹಿತ್ಯ ವಾಸ್ತವ ಸ್ಥಳಗಳದ್ದು. ಅನುಭಾವ ಸಾಹಿತ್ಯ ಅನುಭಾವದ ಮೂಲಕ ಅತೀಂದ್ರಿಯ ಸ್ಥಳಗಳದ್ದು. ದೇಹ ಮತ್ತು ಅದರ ಒಳಗಿನ ಚೈತನ್ಯವಿರುವ ಹಾಗೆ ಒಂದಕ್ಕೊಂದು ಬೆಸೆದುಕೊಂಡಿವೆ. ಇವೆರಡರಲ್ಲಿ ಯಾವ ಪ್ರಕಾರದಲ್ಲಿ ಬರೆಯುವುದು ಉತ್ತಮ ಎನ್ನುವುದಕ್ಕಿಂತ ಬರಹಗಾರರು ಎರಡರೊಳಗೂ ಲೀನವಾಗಬೇಕೆನ್ನುವುದೇ ಸಾಹಿತ್ಯದ ದರ್ಶನವಾಗಿರುತ್ತದೆ. ಸಾಹಿತಿ ಮತ್ತು ಅವನ ಸಾಹಿತ್ಯ ಹೇಗಿರಬೇಕು ಅಂದರೆ "ನೀರಿನ ಒಳಗಡೆ ಉಪ್ಪನ್ನು ಬಚ್ಚಿಟ್ಟಂತೆ ಇರಬೇಕು". ಉಪ್ಪಿನ ಹರಳು ನೀರಿನಲ್ಲಿ ಕರಗಿ ಹೋದರೂ ಅದು ನೀರಿನ ಒಂದೊಂದು ಪರಮಾಣುವಿನಲ್ಲೂ ಬೆರೆತುಕೊಂಡಿರುವಂತೆ ಸಾಹಿತಿ ಮತ್ತು ಸಾಹಿತ್ಯ ಸಮಾಜದೊಳಗೆ ಲೀನವಾಗಿ ಬಿಡಬೇಕು. ಜೀವ ಮತ್ತು ಜೀವನ ನಿಂತಿರುವುದೇ ಅನುಭವ. ಅನುಭಾವದ

ಮೇಲೆಯೇ ತಾನೆ. ಒಬ್ಬ ಬರಹಗಾರ ತಾನು ಹೆಚ್ಚು ಕಾಲ ಬೆಳೆದ ಪರಿಸರದಿಂದಲೂ ಅಥವಾ ಹೆಚ್ಚು ಅಭ್ಯಸಿಸಿದ ವಿಷಯಾಧ್ಯಯನದ ಅವಲೋಕನದಿಂದಲೂ ಕಾವ್ಯ ಕ್ಷೇತ್ರಕ್ಕೆ ಪರಿಚಯವಾಗುತ್ತಾನೆ.

ಒಬ್ಬ ಕೃತಿಕಾರ ತನ್ನ ಜೀವಿತ ಅವಧಿಯಲ್ಲಿ ಒಂದೇ ಕೃತಿಯನ್ನು ಬರೆಯಲಿ, ಆ ಕೃತಿಯು ಒಬ್ಬ ತಾಯಿ ತನ್ನ ಮಗುವಿಗೆ ಜನ್ಮ ಕೊಡುವಾಗ ತನ್ನ ಜೀವವನ್ನು ಒತ್ತೆ ಇಟ್ಟು ಹಡೆಯುವುದಿಲ್ಲವೇ ಹಾಗೆ ಒಬ್ಬ ಲೇಖಕ ಒಂದು ಕೃತಿಯನ್ನು ಹಡೆಯಬೇಕು.

ಬರಹದಲ್ಲಿನ ಸ್ಪಷ್ಟತೆ, ಕಲಾತ್ಮಕತೆ, ಭಾಷೆಯ ಮೇಲಿನ ಹಿಡಿತ ಯಾವ ಪ್ರಕಾರ ನಮಗೆ ಸರಾಗವಾಗಿ ಒದಗಿಬರುತ್ತದೆ ಎಂಬುದನ್ನು ಗುರುತಿಸಿಕೊಂಡರೆ ಸಾಕು. ಆರೋಗ್ಯಕರ ಮನಸ್ಸನ್ನುಳ್ಳ ಸಮಾನ ಮನಸ್ಕರು, ಸಾಹಿತ್ಯದಲ್ಲಿ ಆಸಕ್ತಿ ಉಳ್ಳವರ ಒಂದು ವಲಯವನ್ನು ನಾವು ಕಟ್ಟಿಕೊಳ್ಳಬೇಕು. ಅಲ್ಲಿನ ತೆರೆದ ಮನಸ್ಸಿನ ಚರ್ಚೆ, ಹೊಗಳಿಕೆ, ಟೀಕೆ ನಮ್ಮನ್ನು ಸೃಜನಶೀಲರನ್ನಾಗಿಸುತ್ತದೆ. ಹೊಸದಾಗಿ ಸಾಹಿತ್ಯ ಸೃಷ್ಟಿಸುವವರು ತಮ್ಮ ಆಯ್ಕೆಯ ಪ್ರಕಾರದಲ್ಲಿನ ಹಿರಿಯ ಲೇಖಕರ ಕೃತಿಗಳನ್ನು ಗಮನಿಸಬೇಕು. ಆದರೆ ಸಾಧ್ಯವಾದಷ್ಟು ಅವರ ಸಾಹಿತ್ಯ ಉಂಟುಮಾಡುವ ಪ್ರಭಾವದಿಂದ ದೂರವೇ ಉಳಿದು ನಮ್ಮ ಕೃತಿಯಲ್ಲಿ ನಮ್ಮದೇ ಛಾಪನ್ನು ಮೂಡಿಸಬೇಕು. ಇದು ನನ್ನದೇ ಕೃತಿ ಎಂಬ ಛಾಪು ಒತ್ತುವಷ್ಟರ ಮಟ್ಟಿಗೆ ಈ ಸಂದರ್ಭದಲ್ಲಿ ನಮ್ಮಲ್ಲೇ ಆತ್ಮಸ್ಥೈರ್ಯ ಇರಲೇಬೇಕು.

ಯಾವುದಾದರೂ ತಾತ್ವಿಕ ನಿಲುವಿನಲ್ಲಿ ಗುರುತಿಸಿಕೊಳ್ಳಬೇಕು ಎಂದು ಎಲ್ಲಿ ಹೇಳಿದೆ? ನಮ್ಮ ಬದುಕಿನಲ್ಲಿ ನಾವು ಎದುರಿಸುವ ನೋವುನಲಿವುಗಳು ನಮ್ಮನ್ನು ಆಳವಾಗಿ ಕಾಡಬೇಕು. ದಲಿತರ ಮೇಲಿನ ದೌರ್ಜನ್ಯ, ಮಹಿಳಾ ಸಬಲೀಕರಣದ ಬಗ್ಗೆ ಓದುತ್ತಲೇ ಅವರ ಮೇಲೆ ನಡೆಯುವ ದೌರ್ಜನ್ಯಗಳನ್ನು ಒಪ್ಪಿಕೊಳ್ಳುವುದು, ಜಾತ್ಯಾತೀತ ಎನ್ನುತ್ತಲೇ ಜಾತಿಯ ಬಲವಾದ ಕೋಟೆಯಲ್ಲಿ ಬದುಕುವುದು, ಯುದ್ಧದ ಭೀಕರತೆಯನ್ನು ಕಣ್ಣೆದುರು ನೋಡುತ್ತಲೇ ಅದನ್ನು ತಣ್ಣಗೆ ಅರಗಿಸಿಕೊಳ್ಳುವುದು. ದ್ವಂದ್ವಗಳಲ್ಲಿ ಬದುಕುವ ನಮಗೆ ಯಾವುದಾದರೂ ತಾತ್ವಿಕ ನಿಲುವು ಬೇಕೆನಿಸಿದರೆ ಆರೋಗ್ಯಕರ ವಿಚಾರಗಳನ್ನು ಯಾವುದೇ ವೈಚಾರಿಕ ಪಂಥದೊಳಗೆ ಗುರುತಿಸಿಕೊಳ್ಳುವುದು ತಪ್ಪೇನಿಲ್ಲ.

ಎಲ್ಲ ಚಳುವಳಿಗಳು ಸ್ಥಗಿತಗೊಂಡ ಕಾಲ ಎನ್ನುವುದಕ್ಕಿಂತ ಎಲ್ಲ ಚಳುವಳಿಗಳು ಗುಣಾತ್ಮಕವಾಗಿ ಅಲ್ಲದಿದ್ದರೂ ಇನ್ನೂ ಫಸಲನ್ನು ಕೊಡುತ್ತಿರುವ ಕಾಲ ಎನ್ನಬಹುದಾಗಿದೆ. ಈ ಚಳುವಳಿಗಳ ಉತ್ಪನ್ನದ ಗುಣಾತ್ಮಕತೆ ಕುಗ್ಗುತ್ತಿರುವಾಗ ಮೌಲಿಕ ಕೃತಿಗಳನ್ನು ಕೊಡಬಲ್ಲ ಇನ್ನೊಂದು ಹೊಸ ಚಳುವಳಿ ಕಣ್ ತೆರೆಯಬೇಕಿದೆ. ಹೊಸಬರ ಸಾಹಿತ್ಯ ಕೃತಿಗಳ ಪರಂಪರೆಗೆ ಬೆಂಬಲ ಕೊಡಬಲ್ಲ ಹೊಸ ತಂತ್ರ, ಶೈಲಿ,

ಭಾಷೆಯೊಂದಿಗೆ ಮುನ್ನುಗ್ಗಬೇಕಿದೆ. ಆರಂಭದಲ್ಲಿ ಈ ಹೊಸ ಪ್ರಯೋಗಗಳನ್ನು ಉದಾಸೀನದಿಂದ ಕಂಡರೂ ಕಾಲವೇ ಅದಕ್ಕೆ ಸ್ಥಾನವನ್ನು ದೊರಕಿಸಿ ಕೊಡುತ್ತದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತಬಂಡಾಯ ಚಳುವಳಿಗಳು ಆಯಾ ಸಂದರ್ಭದಲ್ಲಿ ಹುಟ್ಟಿಕೊಂಡವು. ಇಂದು ನಮ್ಮ ಮುಂದೆ ಇರುವ ಸಾಮಾಜಿಕ ಸಾಂಸ್ಕೃತಿಕ ಬಿಕ್ಕಟ್ಟುಗಳೇ ಬೇರೆ. ನಮ್ಮದೇ ಬಿಕ್ಕಟ್ಟು ಎನ್ನುವುದಕ್ಕಿಂತ ಜಾಗತೀಕರಣ ಮಟ್ಟದ ಬಿಕ್ಕಟ್ಟುಗಳು ಇವಾಗಿರುವುದರಿಂದ, ಸಾಹಿತ್ಯದ ಮೇಲೂ ತಮ್ಮ ಪ್ರಭಾವ ಬೀರುತ್ತಿರುತ್ತವೆ. ಈ ದಿಕ್ಕಿನೆಡೆಗೆ ಹೊಸಬರ ಕೃತಿಗಳು ಬೆಳಕು ಚೆಲ್ಲಬೇಕಾಗಿದೆ.

ಕನ್ನಡ ಸೃಜನಶೀಲತೆ ತನ್ನ ಎತ್ತರವನ್ನು ಕಳೆದುಕೊಂಡಿಲ್ಲ. ಬರೆಯುವವರ ಸಂಖ್ಯೆ ಅಪಾರವಾಗಿ ಹೆಚ್ಚುತ್ತಿದೆ. ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿರುವ ಮುದ್ರಣ ತಂತ್ರಗಳಿಂದಾಗಿ ಸಾಹಿತ್ಯ ಕೃತಿಗಳು ಮಾರ್ಕೆಟ್‌ಗಾಗಿ ಹೇರಳವಾಗಿ ಬಿಡುಗಡೆಯಾಗುತ್ತಿವೆ. ಈ ಉತ್ಪಾದನೆಯಲ್ಲಿನ ಗಟ್ಟಿಕಾಳನ್ನು ಆರಿಸಿ ತೆಗೆಯುವ ಕುಶಲ ಕೆಲಸಗಾರರ ಅಗತ್ಯವಿದೆ. ಈ ಕುಶಲ ಕೆಲಸಗಾರರು ಯಾವುದೇ ಪೂರ್ವ ನಿರ್ಧಾರ ಯೋಜನೆಗಳನ್ನು ಕೈಬಿಟ್ಟು, ಹಿರಿಯ ಲೇಖಕರ ಕೃತಿಗಳನ್ನು ಒರೆಗೆ ಹಚ್ಚಿ ನೋಡುವುದನ್ನು ಬಿಟ್ಟು, ಹೊಸಬರ ಕೃತಿಗಳನ್ನು ಕೈಗೆತ್ತಿಕೊಳ್ಳಬೇಕಿದೆ. ತೆರೆದ ಮನಸ್ಸು ಮತ್ತು ತಾಳ್ಮೆಯಿಂದ ಆ ಕೃತಿಗಳನ್ನು ಓದಿ ಮಾತನಾಡಬೇಕಿದೆ. ಇಂದಿನ ಯುವಬರಹಗಾರ್ತಿಯಾದ ನಾನೇ ಕೇಳಿದಂತೆ ನಮ್ಮ ಹಲವಾರು ಜನ ಲೇಖಕರು ಸಾಹಿತ್ಯ ನಿಷ್ಕ್ರಿಯವಾಗುತ್ತಿದೆ. ಹೊಸ ರೀತಿಯ ಕವಿ ಹಾಗೂ ಕವಿತೆಗಳು ಬರುತ್ತಿಲ್ಲ. ಫಲವತ್ತಾದ ಸಾಹಿತ್ಯವೆಲ್ಲವೂ ತಮ್ಮ ಕಾಲಕ್ಕೆ ಮುಗಿಯಿತು. ಮುಗಿದು ಹೋಯಿತು ಎಂಬ ಭರವಸೆ ಇಲ್ಲದ ಮಾತುಗಳನ್ನು ಕವಿತೆ ಕುರಿತಂತೆ ಆಡುತ್ತಿರುತ್ತಾರೆ. ನಾನು ಕೇಳುವುದಿಷ್ಟೇ ಈ ತರಹ ಮಾತನಾಡುವ ಇವರು ಎಷ್ಟು ಹೊಸಬರ ಕೃತಿಗಳನ್ನು ನೋಡಿದ್ದಾರೆ ಹಾಗೂ ತಾಳ್ಮೆಯಿಂದ ಓದಿದ್ದಾರೆ? ಕೃತಿಗಳನ್ನು ನೋಡದೆಯೇ ಕನ್ನಡದ ಸೃಜನಶೀಲತೆ ಮುಗಿದಿದೆ ಎಂದು ಹಾಹಾಕಾರ ಎಬ್ಬಿಸುವವರು ನಮ್ಮಲ್ಲಿದ್ದಾರೆ.

ಒಂದು ಕಾಲದ ಸತ್ವ ಸಾಹಿತ್ಯದ ಸಂವೇದನೆಯಾಗದಿದ್ದರೆ, ಸಾಹಿತ್ಯ ಕ್ರಿಯೆ ಮಾತ್ರವಾಗಿ ಬಿಡಬಹುದು ಆಗ ಅದು ಸಾಹಿತ್ಯಕ್ಕಾಗಿ ಸಾಹಿತ್ಯ ಆಗಬಹುದೇ ಹೊರತು. ಸಾಮಾಜಿಕ ಸಂದರ್ಭದಲ್ಲಿ ತನ್ನನ್ನು ಗುರುತಿಸಿಕೊಳ್ಳಲಾರದು. ಈ ನೆಲೆಗಟ್ಟಿನಲ್ಲಿ ಇವತ್ತಿನ ಸಾಹಿತ್ಯವನ್ನು ನೋಡಬೇಕಾಗಿದೆ. ಆಗ ಇವತ್ತಿನ ಸಮೂಹ ಎದುರಿಸುತ್ತಿರುವ ಸವಾಲುಗಳು ಅವರ ಸೃಜನಶೀಲತೆಯ ಮೇಲೆ ಬೀರುವ ಪರಿಣಾಮ ಅರ್ಥಮಾಡಿಕೊಳ್ಳಬಹುದು. ಆದ್ದರಿಂದ ಇವತ್ತಿನ ಸಾಹಿತ್ಯ ಸ್ಥಿತಿಯನ್ನು ಕಾಲ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎರಡು ವಿಷಯಗಳನ್ನು ಗಮನದಲ್ಲಿರಿಸಿಕೊಂಡು ನೋಡಬಹುದು ಎನಿಸುತ್ತದೆ. ಸಾಮಾಜಿಕ ಸಂದರ್ಭ ಮೊದಲನೆಯದು ಎರಡನೆಯದು ಭಾಷಿಕ ಸಂದರ್ಭ.

ನಮ್ಮ ಸಾಮಾಜಿಕ ಪರಿಸರ ಬಹಳಷ್ಟು ಬದಲಾಗಿದೆ. ಇಲ್ಲಿಯ ಆಗುಹೋಗುಗಳು ಮೌಲ್ಯಗಳು ಬದಲಾಗಿವೆ. ಕಾಲಕ್ಕೆ ಗಡಿಯಾರದ ಮುಳ್ಳನ್ನು ಮೀರಿದ ಓಟ ಬಂದಿದೆ. ಅದಕ್ಕೆ ತಕ್ಕ ಹಾಗೆ ನಮ್ಮ ನಡೆ ನುಡಿಗಳು ಬದಲಾಗಿವೆ. ಭಾಷೆ ಬದಲಾಗಿದೆ. ವ್ಯವಹಾರ ರೀತಿ ಬದಲಾಗಿದೆ. ಸಂವಹನ ಸ್ಥಿತಿ ಬದಲಾಗಿದೆ. ಕಳೆದ ಒಂದು ದಶಕವನ್ನು ಗಮನದಲ್ಲಿಟ್ಟುಕೊಂಡರೂ, ನಮ್ಮ ಸಂದರ್ಭ ಜಾಗತೀಕರಣ ಪ್ರಕ್ರಿಯೆಯೊಂದಿಗೆ ಸಮೀಕರಣ ಗೊಳ್ಳುತ್ತಿರುವುದನ್ನು ಕಾಣುತ್ತೇವೆ. ಈ ಜಾಗತೀಕರಣ ಹೊಸ ಆರ್ಥಿಕ ಸಿದ್ಧಾಂತ ಮಾರುಕಟ್ಟೆ ಸಂಸ್ಕೃತಿ ತನ್ನದೇ ಆದ ಒಂದು ಪ್ರಭಾವ ವಲಯವನ್ನು ಸೃಷ್ಟಿಸಿಕೊಂಡು ಇಡೀ ಸಮೂಹವನ್ನು ಈ ಪ್ರಭಾವವಲಯಕ್ಕೆ ಸೆಳೆಯತೊಡಗಿದೆ. ಈ ರೀತಿಯ ಅಸಂಗತ ಕಾಲಘಟ್ಟ ಇಲ್ಲಿಯ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭವನ್ನು ತನ್ನ ಮೂಗಿನ ನೇರಕ್ಕೆ ಆಳತೊಡಗಿದೆ. ಇದು ಇಲ್ಲಿಯ ಒಟ್ಟು ವಾತಾವರಣಕ್ಕೆ ಬೇರೆಯದೇ ಆದ ಮುಖ ತಂದು ಕೊಟ್ಟಿದೆ ಈ ಸ್ಥಿತಿಯಲ್ಲಿ ಕಳೆದು ಹೋಗತೊಡಗಿರುವುದು ಇಲ್ಲಿಯ ಯುವ ಸಮೂಹ.

ಗ್ರಾಹಕ ಸಮಾಜ ವ್ಯವಸ್ಥೆ ಹುಟ್ಟಿ ಹಾಕುತ್ತಿರುವ ಜಾಗತೀಕರಣವು ಯುವ ಸಮೂಹದ ಬದುಕಿನ ಮೇಲೆ ನೇರ ಪ್ರಭಾವ ಬೀರಿದ್ದು, ಅವರ ಸೃಜನಶೀಲತೆಯನ್ನು ಮಾರುಕಟ್ಟೆ ಸೂತ್ರಕ್ಕೆ ಒಗ್ಗಿಸುವಂತಹ ವಾತಾವರಣವನ್ನು ಸೃಷ್ಟಿಸಿದೆ. ಆದ್ದರಿಂದ ಮಾರುಕಟ್ಟೆ ಸ್ಪರ್ಧೆಯಲ್ಲಿ ಚಲಾವಣೆಯಲ್ಲಿರುವ ಸರಕಾಗಲು ಹೆಣಗಾಡಬೇಕಾಗಿದೆ. ಈ ರೀತಿಯ ಒತ್ತಡ ಇಂದಿನ ಯುವತಲೆಮಾರಿನ ಲೇಖಕರ ಮೇಲೂ ಪರಿಣಾಮ ಬೀರತೊಡಗಿದೆ. ಒಂದು ಕಡೆಯಿಂದ ಅತಂತ್ರ ಉದ್ಯೋಗ ಸ್ಥಿತಿ. ಇನ್ನೊಂದು ಕಡೆಯಿಂದ ವೇಗವಾಗಿ ಸಾಗುವ ಸಾಮಾಜಿಕ ಸ್ಥಿತಿ. ಎರಡು ತನ್ನದೇ ರೀತಿಯಲ್ಲಿ ಅವರ ಬದುಕಿನ ಚಿತ್ರ ಬಿಡಿಸತೊಡಗಿವೆ. ಈ ಸಂದರ್ಭವೇ ಅವರ ಓದನ್ನು ಬರವಣಿಗೆಯನ್ನು ಕಾಲ ಪರಿಸ್ಥಿತಿಗೆ ಹಿಡಿದಿಡುವ ಪ್ರಯತ್ನ ಮಾಡುತ್ತಿದೆ.

ವಿಮರ್ಶೆಯಲ್ಲಿ ಬಹಳಷ್ಟು ಸತ್ಯ ಬೆಳಕು ಕಾಣಬೇಕಿದೆ. ಮಹಿಳೆಯರ ಕೃತಿಗಳನ್ನು ಮಹಿಳೆಯರೇ, ದಲಿತರ ಕೃತಿಗಳನ್ನು ದಲಿತರೇ ಓದಿ ಬರೆಯಬೇಕು ಎನ್ನುವಂತಹ ವಿಚಿತ್ರ ವಾತಾವರಣ ನಮ್ಮಲ್ಲಿದೆ. ಅವರವರ ಸೇನಾ ಪಡೆಗಳನ್ನು ಅವರವರೇ ಕಟ್ಟಿಕೊಳ್ಳಬೇಕಾದ ದುರಂತ ಸ್ಥಿತಿ ಯಾಕೆ ಇವತ್ತು ನಮ್ಮ ಕಣ್ಣೆದುರಿಗಿದೆ? ವಿಮರ್ಶಾಕ್ಷೇತ್ರ ಯಾಕೆ ಇಂತಹ ತಾರತಮ್ಯಗಳನ್ನು ಹುಟ್ಟು ಹಾಕಿದೆ ಎಂಬುದರ ಬಗ್ಗೆ ಬೇಸರವೂ ಆಗುತ್ತದೆ. ದೊಡ್ಡ ದೊಡ್ಡ ವಿಮರ್ಶಕರ ಕೃತಿಗಳನ್ನು ಮಹಿಳಾ ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ ಕುರಿತು ಏನಾದರೂ ಬರೆದಿದ್ದಾರೆ ಎಂದು ಹುಡುಕಿದರೆ ಬಹಳಷ್ಟು ನಿರಾಶೆಯೇ ಆಗುತ್ತದೆ.

ಪ್ರಕಾರ ಹಾಗೂ ತಾತ್ವಿಕ ನಿಲುವಿನಲ್ಲಿ ಗುರುತಿಸಿಕೊಳ್ಳುವುದರ ಬಗ್ಗೆ ಬಿಕ್ಕಟ್ಟಿನ

ವಾತಾವರಣವೇನು ನನಗೆ ಕಂಡು ಬರುತ್ತಿಲ್ಲ. ನಮ್ಮ ಸೃಜನಾತ್ಮಕತೆ ಸಫಲವಾಗಿ ವ್ಯಕ್ತವಾಗಲು ಬೇರೆ ಬೇರೆ ವಿಚಾರಧಾರೆಗಳ ಆಲೋಚನಾ ರೀತಿ ಅಗತ್ಯವಂತೂ ಇದೆ. ಇದು ನಮ್ಮ ವೈಚಾರಿಕ ಪಾತಳಿಯನ್ನು ಗಟ್ಟಿಗೊಳಿಸಲು ಅಗತ್ಯವೇ ವಿನಃ ಅನಿವಾರ್ಯವಲ್ಲ. ಕವಿತೆಯನ್ನು ಬರೆಯುವ ನನಗೆ ಯಾವುದೇ ಬಿಕ್ಕಟ್ಟುಗಳು ಇಲ್ಲ. ಕೆಲವು ಹಿರಿಯ ವಿದ್ವಾಂಸರು ನನ್ನೊಟ್ಟಿಗೆ ಕವಿತೆಯ ಸಾಧ್ಯತೆಗಳ ಬಗ್ಗೆ ಚರ್ಚಿಸಿದ್ದಾರೆ. ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ಹುಟ್ಟಿದ ವಾತಾವರಣ ಜೀವಿಸುವ ಪರಿಸರವೇ ನಮ್ಮ ರಚನೆಗಳಲ್ಲಿ ಮತ್ತೆ ಮತ್ತೆ ವಿವಿಧ ರೂಪಗಳಲ್ಲಿ ಮೈದಳೆದು ಸಮಾಜದೊಂದಿಗಿನ ನಮ್ಮ ಸಂಪರ್ಕದಿಂದ ಕಂಡುಕೊಳ್ಳುವ ಸತ್ಯಗಳೇ ನಮ್ಮ ತಾತ್ವಿಕ ನಿಲುವಾಗಬಹುದು. ನಾನು ಜೀವಿಸುವ ಪರಿಸರದಲ್ಲಿನ ದಿನ ನಿತ್ಯದ ಘಟನೆಗಳು, ಗಂಡುಹೆಣ್ಣು ಬದುಕುವ ರೀತಿಯಲ್ಲಿನ ವ್ಯತ್ಯಾಸಗಳು, ಗಂಡು ಹೆಣ್ಣಿಗೆ ಎಂದೇ ನಿರ್ಮಿತವಾದ ಪ್ರತ್ಯೇಕ ಸಂಸ್ಕೃತಿ, ವಿಚಾರ, ಭಾಷೆ, ನಡವಳಿಕೆಗಳು, ನನ್ನ ಹುಟ್ಟಿನೊಂದಿಗೆ ಬಂದ ನನ್ನ ಜಾತಿ, ನನ್ನನ್ನು ಮತ್ತೆ ಮತ್ತೆ ಕಾಡಿದರೆ ನೋವುಂಟು ಮಾಡಿದರೆ ಸಹಜವಾಗಿಯೇ ನಾನು ರಚಿಸುವ ಕವಿತೆಯಲ್ಲಿ ಈ ಎಲ್ಲ ವಿಚಾರಗಳು ವ್ಯಕ್ತವಾಗುತ್ತಿರುತ್ತವೆ. ನನ್ನ ಕವಿತೆಯ ವಸ್ತು ಯಾವುದಾಗಬೇಕು ಎಂಬುದರ ಕೇಂದ್ರವನ್ನು ನನಗೆ ತೋರುತ್ತಿರುತ್ತದೆ. ಹೀಗಾಗಿ ಸಹಜವಾದ ಬಿಕ್ಕಟ್ಟುಗಳು ತಲ್ಲಣಗಳು ಸೃಜನಶೀಲವಾಗಿ ಬರೆಯಬಲ್ಲ ಲೇಖಕರಿಗೆ ಬೇಕು. ಆದರೆ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ರೀತಿಯಲ್ಲಿ ಅಲ್ಲ.

ಮನುಷ್ಯನ ಜ್ಞಾನ ಬೆಳೆದು ಅಕ್ಷರ ಬರವಣಿಗೆಗಳ ಮೂಲಕ ತನ್ನ ವಿಚಾರ ಮಂಡಿಸುತ್ತಾ ಎಷ್ಟೋ ಕ್ರಾಂತಿಕಾಲ ದಾಟುವ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಬೈಬಲ್, ಕುರಾನ್, ವಚನಗಳು, ದಾಸಭಕ್ತಿ, ಅನುಭವ ಪದ್ಯ, ಪುರಾಣಗಳು ಒಂದರ ನಂತರ ಒಂದು ಆಯಾ ಕಾಲದ ಆಯಾ ಸೃಜನಶೀಲ ವ್ಯಕ್ತಿಗಳ ಮನಸ್ಸಿನ ಭಾವನೆ ವಿಚಾರ ಏನೆಲ್ಲ ಸಲಹೆಗಳಲ್ಲಿ ತನ್ನ ಅಳಲು ತಿಳಿಸುತ್ತಾ ಮನುಕುಲದ ಬೆಳವಣಿಗೆಗೆ ಮಾರಕವಾದ ಕೆಟ್ಟದ್ದರಿಂದ ಬಿಡುಗಡೆಗೊಂಡು ಒಳ್ಳೆಯ ಪ್ರಗತಿಯ ಮಾರ್ಗ ತಿಳಿಸುತ್ತಾ ನಿರಂತರ ಕ್ರಮವಾಗಿ ನಡೆದು ಬಂದದ್ದು ಎಲ್ಲರಿಗೂ ಗೊತ್ತು. ಆಯಾ ಕಾಲದ ವ್ಯಕ್ತಿಯ ಮನಸ್ಸು ಚಿಂತನೆಯ ಭಾವನೆಗಳ ಕುಲುಮೆಯಲ್ಲಿ ಆಯಾ ಪ್ರಕಾರದ ಭಾಷೆ ನಿರೂಪಣೆ ಬರೆದ ಪ್ರಕಾರಗಳು ಬೇರೆ ಬೇರೆ ಇವೆ. ಇಷ್ಟೆಲ್ಲಾ ಇದ್ದರೂ ಮೂಲಭೂತ ಸಮಸ್ಯೆಗಳಾದ ಧರ್ಮ, ಜಾತಿ, ಜಗಳ, ಸ್ತ್ರೀ ಶೋಷಣೆ, ಬಡವ, ಶ್ರೀಮಂತ, ಶಿಕ್ಷಣ, ನಿರುದ್ಯೋಗ ಸಮಸ್ಯೆಗಳು ಯಥಾ ಸ್ಥಿತಿ ಇವೆ.

ಇಂದಿನ ಯುವ ಬರಹಗಾರರು ಹೊಸ ಹುಡುಕಾಟದಲ್ಲಿ ಹೆಜ್ಜೆ ಇಡುತ್ತಿದ್ದಾರೆ. ಇವರೆದುರು ನವೋದಯದ ಆದರ್ಶ, ಪ್ರಗತಿಪರರ ಪ್ರಗತಿಪರ ದೃಷ್ಟಿ, ನವ್ಯರ ಮನುಷ್ಯ ಒಂದು ಸಾಂಕೇತಿಕತೆ ಮತ್ತು ಭಾಷಾ ಬಳಕೆ. ಬಂಡಾಯದ ಧ್ವನಿ, ದಲಿತ

ಸಾಹಿತ್ಯದ ನಿವೇದನೆ ಎಲ್ಲವೂ ಇವೆ. ಆತ್ಮ ಸಂವಹನದಲ್ಲಿ ಭಾಷೆ ಬಳಸುತ್ತಾ ದಿಟ್ಟ ಹೆಜ್ಜೆ ಇಡುವಂತೆ ಮಾಡಿವೆ. ಹೀಗಾಗಿ ಕನ್ನಡದಲ್ಲಿ ಹೊಸ ಸಾಹಿತ್ಯ ಸೃಷ್ಟಿಸುವವರಿಗೆ ಗೊಂದಲಮಯವಾದ ವಾತಾವರಣ ಇಲ್ಲವೇ ಇಲ್ಲ. ಇವರೆದುರು ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ಇರುವುದಕ್ಕಿಂತಲೂ ಹೆಚ್ಚಿನ ಸಾಮಾಜಿಕ ಬಿಕ್ಕಟಿನ ಸ್ಥಿತಿ ಇದೆ. ಇವರೆದುರೂ ಧರ್ಮಾಂಧತೆ ತಾಳತಟ್ಟಿ ಕುಣಿಯುತ್ತಿದೆ. ಜಾಗತೀಕರಣದ ಸೋಗಿನಲ್ಲಿ ಮರು ವಸಾಹತೀಕರಣ ತನ್ನ ಜಾಲ ಬೀಸಿದೆ. ದೇಶೀಯತೆಗೆ ದೊಡ್ಡ ಮರು ಸವಾಲಾಗಿ ಇಂದಿನ ಬದುಕು ಅಸ್ಥಿರಗೊಂಡಿದೆ. ಇಂದು ಮನುಷ್ಯ ಏಕಾಂಗಿಯಾಗಿದ್ದಾನೆ ಸಂಘ ಜೀವನ ವಿಧಾನವೇ ಮರೆಯಾಗಿದೆ. ಸಹೃದಯತೆ ಕಂಡು ಬರುತ್ತಿಲ್ಲ. ಈ ಎಲ್ಲವೂ ಸೃಜನಶೀಲ ಹೃದಯ ತನ್ನ ತಂತಿ ಮಿಡಿತದಿಂದ ಸ್ವರ ಎತ್ತಿ ಹಾಡುತ್ತಲೇ ಇದೆ.

**ಪರಾಮರ್ಶನ ಗ್ರಂಥಗಳು:**


1. ಆಶಾದೇವಿ ಎಮ್.ಎಸ್., (2011), ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
2. ಮಾಧವಿ ಬಂಡಾರಿ, (2011), ನಿನುಂಟು ನಿನ್ನ ರೆಕ್ಕೆಗಳುಂಟು, ಚಿಂತನ ಪುಸ್ತಕ, ಬೆಂಗಳೂರು.
3. ಸುರೇಶ ನಾಗಲಮಡಿಕೆ, (2018), ಹಲವು ಬಣ್ಣದ ಹಗ್ಗ, ದೀಪಂಕರ ಪ್ರಕಾಶನ, ಬೆಂಗಳೂರು.
4. ಸತ್ಯ ಮಂಗಲ ಮಹಾದೇವ (ಸಂ), (2017), ಕಣ್ಣ ಕಾಡುಗೆ ಬೆಳಕೆ, ತಳುಕಿನ ವೆಂಕಟಯ್ಯ ಗ್ರಂಥಮಾಲೆ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.